10

# ದೇವರು ನಮ್ಮ ತಂದೆಯಾಗಿರುವುದು ಹೇಗೆ?

ದೇವರು ಮೂಲ ಸತ್ವ *pneuma,* ಆಗಿದೆ, ಅದರ ಅರ್ಥ "ಆತ್ಮ" ಎಂದು. "ಆತ್ಮ" ಎಂಬುದು ಗ್ರೀಕ್‌ನಲ್ಲಿ ನಪುಂಸಕ ಲಿಂಗದಲ್ಲಿದೆ. ಅದರ ಅರ್ಥ ಆ ಪದಕ್ಕೆ ಪುರುಷ ಇಲ್ಲವೇ ಸ್ತ್ರೀಯ ಮೂಲಾರ್ಥವಿರುವುದಿಲ್ಲ *pneumati* ಇಲ್ಲವೇ "ಆತ್ಮದಿಂದಲೂ (ಲಿಂಗವನ್ನು ಕುರಿತಾಗಿರದೆ) ಆರಾಧಿಸಬೇಕಾಗಿದೆ" ಎಂದು ಯೇಸು ಹೇಳಿದ್ದಾನೆ (ಯೋಹಾನ 4:24). ಇದು ಬಾಪ್ತಿಸ್ಮ ಹೊಂದಿದವರನ್ನು ಕುರಿತ ಪೌಲನ ಮಹಾ ಖಂಡಿತವಾದ ಹೇಳಿಕೆಯನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ ಆಳು ಒಡೆಯ ಎಂದೂ *ಗಂಡು, ಹೆಣ್ಣು* ಎಂದೂ ಭೇದವಿಲ್ಲ" (ಗಲಾತ್ಯ 3:28ಣಿ ಒತ್ತಿ ಹೇಳಿದ್ದು ನನ್ನದು).

ಗಂಡು ಹಾಗೂ ಹೆಣ್ಣು ಎಂಬ ಭಾವನೆ ಒಳಗೊಳ್ಳದಿದ್ದರೆ ಲಿಂಗದ ಬಗ್ಗೆ ಮಾತಾಡಲಿಕ್ಕೆ ಸ್ವಲ್ಪ ಕಷ್ಟವಾಗಿ ತೋರಬಹುದು. ಹಾಗಿದ್ದರೂ ಇದು ಗ್ರೀಕನ್ನೂ ಒಳಗೊಂಡು ಅನೇಕ ಭಾಷಗಳಲ್ಲಿ ಸಾಮಾನ್ಯವಾಗಿದೆ.

ಹಾಗಿದ್ದರೆ, ದೇವರನ್ನು ತಂದೆ ಎಂದು ಸಂಬಂಧಿಸಿ ಹೇಳುವುದು ಹೇಗೆ? ಎರಡು ದಿಶಗಳಲ್ಲಿ ಉತ್ತರವು ಇರುತ್ತದೆ.

## ಒಬ್ಬ ನಿತ್ಯನಾದ ತಂದೆ

ನಾವು ನೇರವಾಗಿ ದೇವತ್ವದೊಳಗಿನ ಆಂತರಿಕ ಸಂಬಂಧಗಳ ಕಡೆಗೆ ಹೋಗುತ್ತೇವೆ. ಇಲ್ಲಿ ದೇವರ ಮೂಲ ಸ್ವಭಾವದ ಬಗ್ಗೆ ನಮ್ಮ ಪ್ರಶ್ನೆಗೆ ಒಂದು ಉತ್ತರವನ್ನು ಕಂಡುಕೊಳ್ಳು ತ್ತೇವೆ. ಆತನು ತ್ರಯೈಕ ದೇವರಾಗಿದ್ದಾರೆ. ಆತನ ಮೂಲಸತ್ವ ಆತ್ಮವಾಗಿದೆ. ಆತನಲ್ಲಿ ಮೂರು ವ್ಯಕ್ತಿಗಳಿದ್ದಾರೆ. ನಿತ್ಯನಾದ ದೇವರು ನಿತ್ಯನಾದ ತಂದೆ, ನಿತ್ಯನಾದ ಕುಮಾರನು, ಹಾಗೂ ನಿತ್ಯನಾದ ಆತ್ಮನು ಆಗಿದ್ದಾನೆ. ಆದುದರಿಂದ ದೇವರು ಮೊದಲು ತಂದೆಯಂತೆ ಮಾತಾಡಲ್ಪಟ್ಟಿದ್ದಾನೆ. ಯಾಕಂದರೆ ತಂದೆಯಂತೆ ಆತನು ತನ್ನ "ಏಕ ಕುಮಾರ" ನೊಂದಿಗೆ ನಿತ್ಯವಾದ ಸಂಬಂಧದಲ್ಲಿ ಇದ್ದಾನೆ (ಯೋಹಾನ 3:16). ತಂದೆಯಾದ ದೇವರು, ಕುಮಾರನಾದ ದೇವರು ಮತ್ತು ಆತ್ಮನಾದ ದೇವರು ಯಾವಾಗಲೂ ಇದ್ದಾರೆ. ಕುಮಾರನಾದ ದೇವರು ಸೃಷ್ಟಿಸಲಟ್ಟ ಜೀವಿಯಾಗಿರುವದಿಲ್ಲ. ಆತ್ಮನಾದ ದೇವರು, ತಂದೆಯಾದ ದೇವರಿಂದ ಹೊರಟು ಬರುತ್ತಾನೆ ಮತ್ತು ಕುಮಾರನಾದ ದೇವರಿಂದ ಕಳುಹಿಸಲ್ಪಟ್ಟಿದ್ದಾನೆ (ಯೋಹಾನ 15:26).

ಇದೆಲ್ಲದರ ಅರ್ಥ ನಿತ್ಯದಲ್ಲಿ ದೇವರಿಗೆ, "ಉತ್ಪಾದಿಸಲು-ಸೃಷ್ಟಿಸಲು" ಸ್ತ್ರೀ ಸಂಗಾತಿಯ ಅವಶ್ಯಕತೆ ಎಂದೂ ಇರಲಿಲ್ಲ. ಅಂಥ ಒರಟಾದ ತತ್ವಗಳು ವಿಗ್ರಹಾರಧಕರಲ್ಲಿಯೂ ಪುರಾಣದ ಕಥೆಗಳಲ್ಲಿಯೂ ಬೇರೂರಿದ್ದವು.[1] ಕನಾನಿನಲ್ಲಿದ್ದ ಫಲಕೊಡುವ ಗಂಡು ಮತ್ತು ಹೆಣ್ಣು ದೇವತೆಗಳು ಹಳೇ ಒಡಂಬಡಿಕೆಯಲ್ಲಿ ಖಂಡಿಸಲ್ಪಟ್ಟವು ಮತ್ತು ಕಾನೂನಿಗೆ ವಿರೋಧವಾದವುಗಳಾಗಿ ಮಾಡಲ್ಪಟ್ಟವು.[2]

ಹಾಗಾದರೆ, ದೇವರನ್ನು ತಂದೆಯಂತೆ ಉಪಯೋಗಿಸುವುದು ಹೇಗೆ ಸಾಧ್ಯ? ದೇವತ್ವದಲ್ಲಿಯ ಆತ್ಮಿಕ ಸ್ವಭಾವದಿಂದ ಆತನು ನಿತ್ಯನಾದ ತಂದೆಯಾಗಿರುವದರಿಂದ ನಾವು ಹಾಗೆ ಮಾಡುತ್ತೇವೆ. ಮೂಲಸತ್ವದಲ್ಲಿ ಆತನು ಆತ್ಮನಾಗಿರುವಂತೆ ವ್ಯಕ್ತಿಯಲ್ಲಿ ಆತನು ತಂದೆಯಾಗಿದ್ದಾನೆ.

## ಸೃಷ್ಟಿಸುವ ತಂದೆ

ದೇವರ ಪಿತೃತ್ವದ ಪ್ರಶ್ನೆಯನ್ನು ಬಿಡಿಸಲು ನಾವು ತೆಗೆದುಕೊಳ್ಳುವ ಎರಡನೆಯ ಸಂಗತಿಯು ದೇವತ್ವದ ಆಂತರಿಕ ಸ್ವಭಾವದ ಹೊರಗೆ ಇರುವಂಥದ್ದಾಗೆ. ನಾವು ಮುಂದುವರಿದಂತೆ, ತ್ರಿತ್ವದಲ್ಲಿ ವ್ಯಕ್ತಿಗಳ ಪ್ರತ್ಯೇಕತೆಯು ಕಂಡು ಬಂದರೂ, ಅವರ ಕಾರ್ಯದ ಐಕ್ಯತೆಯು ಅವರು ಮಾಡಿದ್ದರಲ್ಲಿ ಹಾಗೂ ಮಾಡುತ್ತಿರುವದರಲ್ಲಿ ಸ್ಪಷ್ಟವಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಈ ವಿಷಯವನ್ನು ಮೂರು ಉದಾಹರಣೆ ಗಳು ಸ್ಪಷ್ಟಪಡಿಸುತ್ತವೆ. *ಸೃಷ್ಟಿಯು* ಮೊದಲನೆಯ ಉದಾಹರಣೆ (ಆದಿಕಾಂಡ 1:1, 2ಣಿ ಯೋಹಾನ 1:1-3ಣಿ ಇಬ್ರಿಯ 1:1-3ಎ). ಇದು ಒಟ್ಟಿನಲ್ಲಿ - ತ್ರಿತ್ವದ ದೇವರ ಕಾರ್ಯವಾಗಿದೆ. *ಪ್ರಕಟನೆಯು* ಎರಡನೆಯ ಉದಾಹರಣೆ (ಗಲಾತ್ಯ 1:12ಣಿ ಎಫೆಸ 3:2-6). ಇದೂ ಸಹ ಒಟ್ಟಿನಲ್ಲಿ - ತ್ರಿತ್ವದ ಕಾರ್ಯವಾಗಿದೆ. *ಪ್ರಾಯಶ್ಚಿತ್ತವು* (ಪಾಪನಿವಾರಣೆಯು) ಮೂರನೆಯ ಉದಾಹರಣೆಯಾಗಿದೆ. ಇಲ್ಲಿ ಒಟ್ಟಾಗಿ - ತ್ರಿತ್ವದ ಕಾರ್ಯವು ಕಂಡು ಬರುತ್ತದೆ (ಇಬ್ರಿಯ 9:14ಣಿ 10:3-10).

ಇನ್ನೂ ಹೆಚ್ಚು ಉದಾಹರಣೆಗಳನ್ನು ಹೇಳಬಹುದಾಗಿದ್ದರೂ ದೇವರು ತನ್ನ ಕಾರ್ಯದಲ್ಲಿ "ಪೂರ್ಣವಾಗಿ" ಒಳಗೊಂಡಿದ್ದನೆಂಬುದನ್ನು ಉದಾಹರಿಸಲು ಇವು ಸಾಕಷ್ಟಾಗಿವೆ. ತಂದೆಯಾದ ದೇವರು ಒಬ್ಬನೇ ಸೃಷ್ಟಿಯಲ್ಲಿ, ಪ್ರಕಟಣೆಯಲ್ಲಿ ಹಾಗೂ ಪ್ರಾಯಶ್ಚಿತ್ತದಲ್ಲಿ ಒಳಗೊಂಡಿರುವದಿಲ್ಲ. ಈ ಕಾರ್ಯಗಳಲ್ಲಿ ವ್ಯಕ್ತಿಗಳ ಪಾತ್ರಗಳ ವ್ಯತ್ಯಾಸವು ಕಾರ್ಯಗ ಳಲ್ಲಿಯ ಐಕ್ಯತೆಯನ್ನು ರದ್ದುಪಡಿಸುವದಿಲ್ಲ. ಆದರೆ ಅದನ್ನು ವೃದ್ಧಿಸುವಂಥದ್ದಾಗಿರುತ್ತದೆ. ಉದಾಹರಣೆಯಾಗಿ ವಿಮೋಚನೆಯ ಪೂರ್ಣ ಯೋಜನೆಯಲ್ಲಿ ತಂದೆಯಾದ ದೇವರು, ಕುಮಾರನಾದ ದೇವರನ್ನು ಲೋಕದ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣ ಹೊಂದಲು ಕೊಟ್ಟನು. ಹಾಗಿದ್ದರೂ ತಂದೆಯಾದ ದೇವರು ಶಿಲುಬೆಯ ಮೇಲೆ ಸಾಯಲಿಲ್ಲಣಿ ಇಲ್ಲವೇ ಶಿಲುಬೆಯ ಮೇಲೆ ಶ್ರಮೆತಾಳಲಿಲ್ಲ. ನಮಗಾಗಿ ಮರಣ ಹೊಂದಲು ತಂದೆಯಾದ ದೇವರು ಕುಮಾರನಾದ ದೇವರನ್ನು ಕಳುಹಿಸಿಕೊಟ್ಟನು. ಕುಮಾರನ ಹೂಣಿಡುವಿಕೆ ಮತ್ತು ಪುನರುತ್ಥಾನದ ನಂತರ ತಂದೆಯಾದ ದೇವರು ಆತನಿಗೆ ಎಲ್ಲಾ ಬಲವನ್ನೂ ಅಧಿಕಾರವನ್ನೂ ಕೊಟ್ಟು ತನ್ನ ಬಲಗಡೆಯಲ್ಲಿ ಆತನಿಗೆ ಉನ್ನತಸ್ಥಾನಕೊಟ್ಟನು (ಮತ್ತಾಯ 28:18ಣಿ ಯೋಹಾನ 3:16ಣಿ ಅಪೊಸ್ತಲರ ಕೃತ್ಯ 2:23-33). ದೇವತ್ವದ ಸ್ವಭಾವದ "ಬಳಿಗೆ" ಹಾಗೂ ದೇವತ್ವದ ಕಾರ್ಯಗಳನ್ನು "ಹೊರತುಪಡಿಸಿ" ನೋಡಿದ ನಂತರ ತಂದೆಯಂತೆ ದೇವರ ಬಗ್ಗೆ ನಾವು ಏನನ್ನು ತಿಳಿದು ಕೊಳ್ಳುತ್ತೇವೆ? ಆತನು ನಿತ್ಯವಾಗಿ ತಂದೆಯಾಗಿರುವನು. ಇದು ಲೈಂಗಿಕ ಸಂಬಂಧದಿಂದಾಗಲೀ ಇಲ್ಲವೇ ಪುರುಷತ್ವದ ಕಾರಣದಿಂದಾಗಲೀ ಅಲ್ಲ ಆದರೆ ದೈವಿಕ ಸ್ವಭಾವದಿಂದ ಆದದ್ದಾಗಿದೆ. ಸೃಷ್ಟಿಸುವ ಆತನ ಕಾರ್ಯವು ತಂದೆಯಾದ ದೇವರ ಕಾರ್ಯ ಮಾತ್ರವೇ ಆಗಿರುವದಿಲ್ಲ. ಆದರೆ ಸಂಪೂರ್ಣ ದೇವರದಾಗಿದೆ. ಒಂದುಗೂಡಿಸುವದರಿಂದ - ಭಾಗವಹಿಸುವದರಿಂದ - ಮಾನವ ಕುಲದ ವ್ಯವಹಾರಗಳಲ್ಲಿ ಹಾಗೂ ಗಮ್ಯಗಳಲ್ಲಿ ಆತನು ಅದ್ವಿತೀಯ ಪಾತ್ರ ತೆಗೆದು ಕೊಳ್ಳುವದನ್ನು ನಾವು ಕಂಡುಕೊಳ್ಳುತ್ತೇವೆ.

ಈ ಬೆಳಕಿನಲ್ಲಿ, ದೇವರಿಗಾಗಿ "ತಂದೆ" ಎಂಬ ಮಾತು ಪುರಾತನರು ಪುರುಷ

ಪ್ರಧಾನರಾಗಿದ್ದರೆಂಬುದಕ್ಕೆ ಪುರಾವೆಯಾಗಿರುವದಿಲ್ಲ.[3] ನಾವು ಮೊದಲು ಹೇಳಿದಂತೆ, ವಿಗ್ರಹಾರಾಧಕರೂ ಅನ್ಯ ಸಮಾಜದವರೂ ಸಾಮಾನ್ಯವಾಗಿ ಅವರ ದೇವರುಗಳು ಪುರುಷರೂ, ಸ್ತ್ರೀಯರೂ ಆಗಿರುವರೆಂದು ಕಲ್ಪಿಸಿಕೊಂಡಿದ್ದರು. ಅವರ ಕುಲಗಳ ಆಚರಣೆಯಲ್ಲಿ ಹೆಚ್ಚಾದವುಗಳು ಅಲ್ಲದಿದ್ದರೂ ಅನೇಕವುಗಳು ಫಲವತ್ತತೆಯ ಸಂಸ್ಕಾರಗಳಾಗಿದ್ದವು. ಪುರುಷ ದೇವರುಗಳು ತಮ್ಮ ಸತಿಗಳೊಂದಿಗೆ ಸ್ವಚ್ಛಂದವಾಗಿ ವರ್ತಿಸುತ್ತಿದ್ದವು. ಈ ಆಚಾರಗಳು ಹಳೇ ಒಡಂಬಡಿಕೆಯಲ್ಲಿ ಪುನ ಪುನ ತೋರಿಸಿದಂತೆ ಕೆಲವು ಸಲ ಇಸ್ರಾಯೇಲ್ಯರನ್ನು ಆಕರ್ಷಿಸುತ್ತಿದ್ದವು. ಇಸ್ರಾಯೇಲ್ಯರ ದೇವರು ಅದೃಶ್ಯ ವಾದಾತನೂ ತಮ್ಮ ಸುತ್ತಲಿನ ಜನಾಂಗದಲ್ಲಿ ಪ್ರದರ್ಶಿಸುವದಕ್ಕಿಂದ ಹೆಚ್ಚು ಗಂಭೀರನೂ ಆಗಿದ್ದನು.

ಆದುದರಿಂದ, ಇಸ್ರಾಯೇಲ್ಯರು ತಮ್ಮ ದೇವರನ್ನು "ತಂದೆ" ಎಂದು ಕರೆದಾಗ ಸಮಯದ ಧ್ವನಿಯನ್ನು ಪ್ರತಿಬಿಂಬಿಸಿದರು. ಆತನು ಒಬ್ಬನೇ ನಿಜವಾದ ಮತ್ತು ಜೀವಿ ಸುವ ದೇವರಾಗಿದ್ದನು. "ಇಸ್ರಾಯೇಲ್ಯರೇ, ಕೇಳಿರಿ ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು" (ಧರ್ಮೋಪದೇಶಕಾಂಡ 6:4). ಬಹುದೇವತಾರಾಧನೆಯಾಗಲಿ, ತಾಯಿ ದೇವರಾಗಲೀ ಇರಲಿಲ್ಲ. ಈ ಪ್ರತಿಬಂಧಗಳು ನಿಯಮದಿಂದ ಒತ್ತಾಯ ಪಡಿಸಲ್ಪಟ್ಟವು. ಇತರ ಜನಾಂಗಗಳ ಧಾರ್ಮಿಕ ವಿಧಾನಗಳು ಪುರುಷ ದೇವರುಗಳನ್ನೂ ಸ್ತ್ರೀ ದೇವರುಗಳನ್ನೂ ಕರೆದವು, ಆದರೆ ಇಸ್ರಾಯೇಲಿನ ಪ್ರಕಟಿತ ಧರ್ಮವಲ್ಲ, ಇಡೀ ಹೀಬ್ರೂ ಬೈಬಲಿನಲ್ಲಿ "ದೇವತೆ" ಎಂಬುದಕ್ಕೆ ಪ್ರತ್ಯೇಕ ಹೀಬ್ರೂ ಪದವು ಇರಲಿಲ್ಲ.[4] ಪಿತೃ ಭಾವನೆಯನ್ನು ರೂಢಿಸಿಕೊಳ್ಳುವಲ್ಲಿ ದೇವರು "ತಾಯಿ" ಎಂಬುದರ ಬದಲು "ತಂದೆ" ಎಂಬುದಾಗಿ ಕರೆಯಲ್ಪಡುವದರ ವಿಪುಲವಾದ ಪುರಾವೆಯು ಬೈಬಲಿನಲ್ಲಿ ಹಾಗೂ ಹೊರಗೆ ಕಂಡುಬರುತ್ತದೆ. ಆ ಹೇಳಿಕೆಯು ದೇವರ ನಿಜವಾದ ಪ್ರಕಟಣೆಯಂತೆ ಪರಶುದ್ಧ ಬರಹದ ಸ್ಪಷ್ಟತೆಯನ್ನು ಅಲ್ಲಗಳೆಯುತ್ತದೆ. ಕರ್ತನ ಪ್ರಾರ್ಥನೆಯನ್ನು ಅದು ದೇವರನ್ನು "ನಮ್ಮ ತಂದೆಯು" ಎಂದು ಸಂಬೋಧಿಸುವದರ ತಳಹದಿಯ ಮೇಲೆ ಅದನ್ನು ಹೇಳುವದನ್ನು ನಿಲ್ಲಿಸ ಬೇಕೆಂದು ಹೇಳುವಾಗ, ಅದು ಬೈಬಲಿನ ಸಮಯದ್ದಲ್ಲ ಆದರೆ ನಮ್ಮ ಸಮಯದ ದು ಖಕರವಾದ ಸಂಗತಿಯಾಗಿದೆ.

## ಸರ್ವಾತ್ರಿಕ ತಂದೆ

ನಿತ್ಯವಾದ ತ್ರಿತ್ವದಲ್ಲಿರುವ ವ್ಯಕ್ತಿಗಳ ಸಂಬಂಧದಲ್ಲಿ ದೇವರನ್ನು ಕುರಿತು ತಂದೆಯಂತೆ ನಾವು ಈಗಾಗಲೇ ಮಾತಾಡಿದ್ದೇವೆ. ಈಗ ನಾವು ದೇವರನ್ನು ತಂದೆಯಂತೆ ಯೋಚಿಸುವಂತೆ, ತನ್ನ ಜನರಿಗೆ ದೇವರ ವಿಸ್ತಾರವಾದ ಐತಿಹಾಸಿಕ ಪ್ರಕಟಣೆಯ ಮೇಲೆ - ಬೈಬಲಿನ ಮೇಲೆ ಹಿಂದಿರುಗಿ ನೋಡುತ್ತೇವೆ. ಇಲ್ಲಿ ದೇವರು ಮೂರು ಭಿನ್ನವಾದ ಮಾರ್ಗಗಳಲ್ಲಿ ತಂದೆಯಂತೆ ಪ್ರಕಟಿಸಿಕೊಂಡದ್ದನ್ನು ಕಂಡು ಕೊಳ್ಳುತ್ತೇವೆ.

ನಾವು ಗಮನಿಸಬೇಕಾದ ಮೊದಲನೆಯ ಮಾರ್ಗವು *ದೇವರು ತನ್ನ ಸೃಷ್ಟಿಯ ಮೂಲಕ ಸಾರ್ವತ್ರಿಕ ತಂದೆಯಾಗಿದ್ದಾನೆ.* ತ್ರಿತ್ವದಲ್ಲಿಯ ಎಲ್ಲಾ ಮೂವರು ವ್ಯಕ್ತಿಗಳು ಸೃಷ್ಟಿ ಕಾರ್ಯದಲ್ಲಿ ತೊಡಗಿದ್ದನ್ನು ನಾವು ನೋಡಿದ್ದರಿಂದ, ಈಗ ಸೃಷ್ಟಿಯಲ್ಲಿ ತಂದೆಯ ಕಾರ್ಯವು ಒತ್ತಿ ಹೇಳಿದ್ದರ ಬಗ್ಗೆ ಜ್ಞಾಪಿಸಲ್ಪಟ್ಟಿದ್ದೇವೆ. (ಅದೇ ರೀತಿಯಲ್ಲಿ ಎಲ್ಲಾ ಮೂವರು ವ್ಯಕ್ತಿಗಳು ವಿಮೋಚನೆಯ ಸಂಪೂರ್ಣ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ವಿಮೋಚ ಕನ ಪಾತ್ರದಲ್ಲಿ ಒಂದಾಗಿಸಿಕೊಂಡು ದೇವರ ಕುಮಾರನು ವಿಮೋಚನೆಯ ಕ್ರಯವನ್ನು ಕೊಡುವದನ್ನು ನೋಡುತ್ತೇವೆ.) ತನ್ನ ಸೃಷ್ಟಿಗೆ ದೇವರ ಪಿತೃ ಸಂಬಂಧವು ಆತನ ಸೃಷ್ಟಿಯ ಕಾರ್ಯದಿಂದ ಉದ್ಭವಿಸುತ್ತದೆ. ಮಾನವತೆಯು ಸೃಷ್ಟಿಯ ಕಿರೀಟದಂತೆ

ಕಾಣಲ್ಪಟ್ಟಿದೆ ಯಾಕಂದರೆ ಮಾನವರಲ್ಲಿ ದೇವರ ಸ್ವರೂಪವೂ ಹೋಲಿಕೆಯೂ ನೆಡಲ್ಪಟ್ಟಿದೆ (ಆದಿಕಾಂಡ 1:26, 27).

ದೇವರ ಸೃಷ್ಟಿಯ ಕಾರ್ಯದಲ್ಲಿ ಪ್ರದರ್ಶಿಸಲ್ಪಟ್ಟ ಬಲವು ಆತನಿಗೆ ಆತನ ಎಲ್ಲಾ ಸೃಷ್ಟಿಯ ಮೇಲೆ ಆತನ ಒಡೆತನವನ್ನು ದೃಢಪಡಿಸುತ್ತದೆ. ಆ ಸೃಷ್ಟಿಕರ್ತ ತಂದೆಯ ಮತ್ತು ಶಕ್ತಿಯ ಕರ್ತನ ಒಂದುಗೂಡಿಸುವಿಕೆಯನ್ನು ಬೈಬಲಿನ ಅನೇಕ ವಾಕ್ಯಭಾಗಗಳು ಪ್ರತಿಬಿಂಬಿಸುತ್ತವೆ. ದೇವರ ಸಾರ್ವತ್ರಿಕ ಪಿತೃತ್ವ ಹಾಗೂ ಆತನ ಸೃಷ್ಟಿಯ ಮಧ್ಯದಲ್ಲಿಯ ನಿಕಟ ಸಂಬಂಧವನ್ನು ಅವು ದೃಢಪಡಿಸುತ್ತವೆ:

> ತಂದೆಯು ಮಕ್ಕಳನ್ನು ಕನಿಕರಿಸುವಂತೆ ಕರ್ತನು ತನ್ನಲ್ಲಿ ಭಯಭಕ್ತಿ ಉಳ್ಳವರನ್ನು ಕನಿಕರಿಸುತ್ತಾನೆ. ಆತನು ನಮ್ಮ ಪ್ರಕೃತಿಯನ್ನು ಬಲ್ಲನು, ನಾವು ಧೂಳಿಯಾಗಿದ್ದೇವೆಂದು ನೆನಪು ಮಾಡಿಕೊಳ್ಳುತ್ತಾನೆ.
>
> … ಕರ್ತನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ. ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತನೆ 103:13, 14, 19).

ದೇವರು ತನ್ನ ಸೃಷ್ಟಿಯ ಮೇಲೆ ಆಳಿಕೆ ನಡಿಸುವಂತೆ ಮನುಷ್ಯನ ಕಡೆಗಿರುವ ತನ್ನ ಕರುಣೆಯಲ್ಲಿ ತಂದೆಯಾಗಿದ್ದಾನೆ. ಅಥೇನೆಯಲ್ಲಿ ಅರಿಯೋಪಾಗದ ತತ್ವಜ್ಞಾನಿಗಳಿಗೆ ಪೌಲನು ಪ್ರಸಂಗಿಸುತ್ತಿದ್ದಾಗ ದೇವರು ಸಾರ್ವತ್ರಿಕ ಪಿತೃವಾಗಿ ಗುರುತಿಸಲ್ಪಟ್ಟನು. ದೇವರ ಬಗ್ಗೆ "ನಾವು ಆತನ ಸಂತಾನದವರೇ" ಎಂದು ಹೇಳಿದ ಅವರ ಕವಿಗಳಲ್ಲಿ ಒಬ್ಬನ ಮಾತು ಗಳನ್ನು ಅವನು ಉಲ್ಲೇಖಿಸಿದನು (ನೋಡಿರಿ ಅಪೊಸ್ತಲರ ಕೃತ್ಯ 17:24-29ಣಿ ವಿಶೇಷವಾಗಿ ವ. 28). ನಾವು ದೇವರ ಸಂತಾನವಾಗಿದ್ದರೆ, ಆತನು ನಮ್ಮ ತಂದೆಯಾಗಿರುವನು. ಇದು ಎಲ್ಲಾ ಜನರಿಗೆ ಸಂಬಂಧಿಸಿದ್ದಾಗಿದೆ. ಹೀಗೆ ಸೃಷ್ಟಿಸಿದ್ದರಿಂದ, ದೇವರು ಪ್ರತಿಯೊಬ್ಬನ ಸಾರ್ವತ್ರಿಕ ತಂದೆಯಾಗಿದ್ದಾನೆ.

ಆದಾಮನ ವಂಶಾವಳಿಯನ್ನು ಓದುವುದು ಆಸಕ್ತಿಯುಳ್ಳದ್ದಾಗಿದೆ. "ದೇವರು ಸೃಷ್ಟಿಸಿದ ದಿನದಲ್ಲಿ ಮನುಷ್ಯನನ್ನು ತನ್ನ ಹೋಲಿಕೆಗೆ ಸರಿಯಾಗಿ ಉಂಟು ಮಾಡಿದನು. ಅವರನ್ನು ಗಂಡುಹೆಣ್ಣಾಗಿ ಉಂಟುಮಾಡಿದನು. ಅದೇ ದಿವಸದಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯ ಎಂದು ಹೆಸರಿಟ್ಟನು" (ಆದಿಕಾಂಡ 5:1ಬಿ, 2). ಹಾಗಿದ್ದರೂ, ಹೊಸ ಒಡಂಬಡಿಕೆಯಲ್ಲಿ ಈ ಸೃಷ್ಟಿಯನ್ನು ವಿವರಿಸಲು ಉಪಯೋಗಿಸಿದ ಭಾಷೆಯು ಯೇಸುವಿನ ವಂಶಾವಳಿಯ ಕೊನೆಯ ಹೇಳಿಕೆಯಲ್ಲಿ, "ಆದಾಮನ ಮಗನು, ದೇವರ ಮಗನು" ಎಂಬುದು ಕಂಡುಬರುತ್ತದೆ (ಲೂಕ 3:38ಸಿ, ಡಿಣಿ ಒತ್ತಿ ಹೇಳಿದ್ದು ನನ್ನದು). ಆದಾಮನ (ಮನುಷ್ಯನ) ಸೃಷ್ಟಿಯು "ತಂದೆಯ" ಪಾತ್ರವಾಗಿ ನೋಡಲ್ಪಟ್ಟಿದೆ. ಮೂಲ ಮನುಷ್ಯನ ತಂದೆಯಂತೆ ಆತನು ಎಲ್ಲಾ ಮಾನವ ಕುಲದ ತಂದೆಯಾಗಿದ್ದಾನೆ.

## ಆಯ್ಕೆ ಮಾಡುವ ತಂದೆ

*ದೇವರು ತನ್ನ ವಾಗ್ದಾನ/ಒಡಂಬಡಿಕೆಯ ಮಾರ್ಗದಿಂದ ಆಯ್ಕೆಮಾಡುವ ತಂದೆಯೂ ಆಗಿದ್ದಾನೆ.* ಸೃಷ್ಟಿಯಿಂದ ದೇವರನ್ನು ಸಾರ್ವತ್ರಿಕ ತಂದೆಯೆಂಬ ಭಾವನೆಯಿಂದ ವಾಗ್ದಾನ/ಒಡಂಬಡಿಕೆಯಿಂದ ಆಯ್ಕೆ ಮಾಡುವ ತಂದೆ ಎಂಬ ಭಾವದವರೆಗಿನ ಬದಲಾವಣೆಯಾದ ಆಲೋಚನೆಯನ್ನು ಮಲಾಕಿಯ ಪುಸ್ತಕದ ಒಂದು ವಾಕ್ಯಭಾಗವು ನಮಗೆ ಕೊಡುತ್ತದೆ. ತನ್ನ ಜನಾಂಗದೊಂದಿಗೆ ತನ್ನ ಒಡಂಬಡಿಕೆಯು "ಜೀವದ ಹಾಗೂ ಸಮಾಧಾನದ" ಒಡಂಬಡಿಕೆಯಾಗಿತ್ತು ಎಂದು ದೇವರು ಹೇಳಿದನು. "ನೀವು ಮಾರ್ಗಬಿಟ್ಟು ಹೋಗಿದ್ದೀರಿ … ನೀವು ನನ್ನ ಮಾರ್ಗಗಳನ್ನು ಕೈಕೊಂಡು ನಡೆಯುತ್ತಿರುವದಿಲ್ಲ" ಎಂದು

ಆತನು ಹೇಳಿದನು. ಸಾರ್ವತ್ರಿಕ ಸತ್ಯದ ಮೇಲೆ ಅವಲಂಬಿಸಿ ಯೆಹೋದ್ಯರಿಗೆ ಮಲಾಕಿಯನು ಬಿನ್ನಹ ಮಾಡಿಕೊಂಡನು. "ನಮ್ಮೆಲ್ಲರಿಗೆ ಒಬ್ಬನೇ ತಂದೆಯಲ್ಲವ್ರೋಣಿ ಒಬ್ಬನೇ ದೇವರು. ನಮ್ಮನ್ನು ಸೃಷ್ಟಿಸಿದನಲ್ಲಾಣಿ ಹೀಗಿರಲು ನಾವು ಒಬ್ಬರಿಗೊಬ್ಬರು ದ್ರೋಹಮಾಡಿ ದೇವರು ತಮ್ಮ ಪಿತೃಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಭಂಗಪಡಿಸುವದೇಕೆ?"[5] (ಮಲಾಕಿಯ 2:3-10). ಮಲಾಕಿಯನು ಎರಡು ಪ್ರಮುಖ ತತ್ವಗಳ ತಳಹದಿಯ ಮೇಲೆ ಜನರೊಂದಿಗೆ ವಾದಿಸಿದನು: ದೇವರು ತಂದೆಯಾಗಿದ್ದಾನೆ ಯಾಕಂದರೆ ಆತನು ಸೃಷ್ಟಿಕರ್ತನುಣಿ ದೇವರು ಅವರೊಂದಿಗಿನ ತನ್ನ ಒಡಂಬಡಿಕೆಯ ನಿಮಿತ್ತ ಇಸ್ರಾಯೇಲಿನ ತಂದೆಯಾಗಿದ್ದಾನೆ.

ದೇವರು ವಾಗ್ದಾನ/ಒಡಂಬಡಿಕೆಯ ಮಾರ್ಗದಿಂದ ಆಯ್ಕೆ ಮಾಡುವ ತಂದೆಯಂತೆ ಇರುವುದು ಹಳೇ ಒಡಂಬಡಿಕೆಯ ಪ್ರಮುಖ ಪ್ರಸ್ತಾಪವಾಗಿದೆ. ಮುಖ್ಯವಾದ ಪ್ರಗತಿಯಾಗುತ್ತಿರುವದನ್ನು ನಾವು ನೋಡುತ್ತೇವೆ. ಸೃಷ್ಟಿಸಿದರಿಂದ ದೇವರು ವಿಶ್ವದ ತಂದೆಯಂತೆ ಪಾಪವು ಮನುಷ್ಯನನ್ನು ಆತನಿಂದ ಬೇರೆ ಮಾಡಲು ಕಾರಣವಾಗದಿರುವವರೆಗೆ ದೇವರೊಂದಿಗೆ ಮನುಷ್ಯನಿಗೆ ಅನ್ಯೋನ್ಯತೆಯಿಂದ ಇರಲು ಸಾಕಷ್ಟು ಕಾರಣಗಳಿದ್ದವು. ತನ್ನ ಶುದ್ಧ ಸ್ಥಿತಿಯಲ್ಲಿ ಆದಾಮನು "ದೇವರ ಮಗನು" ಎಂದು ನಾವು ನೋಡಿದ್ದೇವೆ. ಮನುಷ್ಯನು ಪಾಪಮಾಡಿದಾಗ, ಅವನು ದೇವರಿಂದ ಬೇರೆ ಮಾಡಲ್ಪಟ್ಟನು. ಅಂದಿನಿಂದ, ಚರಿತ್ರೆಯಲ್ಲೆಲ್ಲಾ, ಸೃಷ್ಟಿಸಲ್ಪಟ್ಟದ್ದರಿಂದ ವಿಶ್ವದ ತಂದೆಯಂತೆ ದೇವರು, ದೇವರೊಂದಿಗಿನ ಪೂರ್ಣ ಅನ್ಯೋನ್ಯತೆಗಾಗಿ ಸಾಕಷ್ಟು ತಳಹದಿಗಳಿರುವದಿಲ್ಲ.

ದೇವರ ತೊಡಗುವಿಕೆ ಮುಖಾಂತರ, ಅಬ್ರಾಮನು ಆತನ ಸೇವೆಗೆ ಕರೆಯಲ್ಪಟ್ಟನು ಹಾಗೂ ದೇವರ ವಾಗ್ದಾನದಿಂದ (ಆದಿಕಾಂಡ 12:1-3) ಹಾಗೂ ಒಡಂಬಡಿಕೆಯಿಂದ (ಆದಿಕಾಂಡ 17:1, 2) ಪ್ರೋತ್ಸಾಹಿಸಲ್ಪಟ್ಟನು ಹಾಗೆಯೇ ಅವನ ಮಗ ಇಸಾಕನು ಹಾಗೂ ಅವನ ಮೊಮ್ಮಗ ಯಾಕೋಬನು (ಇಸ್ರಾಯೇಲನು) (ಆದಿಕಾಂಡ 26:2-5ಣಿ 35:9-12) ಕರೆಯಲ್ಪಟ್ಟರು. ದೇವರ ಈ ಕಾರ್ಯಗಳು *ತಂದೆಯಾದ* ದೇವರ ಕಾರ್ಯಗಳಾಗಿರುವವೋ? ಹೌದು, ಸತ್ಯವಾಗಿ, ಆತನ ಜನರಿಗೆ ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲು, ಸಿನಾಯಿಯಿಂದ ಪ್ರಾರಂಭಿಸಿ, ದೇವರು ಇಸ್ರಾಯೇಲನ್ನು ತನ್ನ ಚೊಚ್ಚಲು ಮಗುವಿನಂತೆ ಸ್ವೀಕರಿಸಿಕೊಂಡಿದ್ದನು (ವಿಮೋಚನಕಾಂಡ 4:22). ದೇವರಿಂದ ಕರೆಯಲ್ಪಟ್ಟ ಜನರು ಒಡಂಬಡಿಕೆಗೆ ತಮ್ಮ ನಂಬಿಗಸ್ತಿಕೆಯ ತಳಹದಿಯ ಮೇಲೆ ಆತನ ಜನಾಂಗವಾಗಿರಲು ಇತರ ಎಲ್ಲರೊಳಗಿಂದ ಆಯ್ಕೆ ಮಾಡಿಕೊಳ್ಳುತ್ತಾನೆಂದು ತಿಳಿದವರಾಗಿದ್ದರು (ವಿಮೋಚನ ಕಾಂಡ 19:3-6).

ಸಮಯವು ದಾಟಿದಂತೆ, ಜನಾಂಗವು ಕಾನಾನನ್ನು ಪ್ರವೇಶಿಸಿತ್ತು, ಅವರಿಗೆ ನಾಯಕರಾಗಿ ನ್ಯಾಯಾಧಿಪತಿಗಳಿದ್ದರು. ಅನಂತರದಲ್ಲಿ ಅರಸುತನವು ಸ್ಥಾಪಿಸಲ್ಪಟ್ಟಿತು. ದಾವೀದ ಮತ್ತು ಸೊಲೊಮೋನರ ಆಳಿಕೆಗಳ ಪ್ರಭಾವ, ಘನತೆ, ಹಾಗೂ ಬಲದ ಮಟ್ಟದಲ್ಲಿ ದೇವರು ಅವರಿಗೆ ತಾನು ಅವರ ತಂದೆಯಾಗಿದ್ದೇನೆಂದು ಜ್ಞಾಪಿಸಿದನು. ದೇವರು ದಾವೀದನಿಗೆ ಅವನ ಮಗ ಸೊಲೊಮೋನನನ್ನು ಕುರಿತು, "... ನಾನು ಅವನಿಗೆ ತಂದೆಯಾಗಿರುವೆನು ಹಾಗೂ ಅವನು ನನಗೆ ಮಗನಾಗಿರುವನು ..." (2 ಸಮುವೇಲ 7:12-14ಣಿ ನೋಡಿರಿ 1 ಪೂರ್ವಕಾಲವೃತ್ತಾಂತ 28:4-7) ಎಂದು ಹೇಳಿದನು. ದಾವೀದನ ಅರಸುತನದ ಮಹಿಮೆಯುಳ್ಳ ಸಮಯಗಳ, ಒಡಂಬಡಿಕೆಯ ಹಾಗೂ ದೇವರನ್ನು ತನ್ನ ತಂದೆಯಂತೆ ಸ್ವೀಕರಿಸಿದ್ದನ್ನು ಕುರಿತು ಕೀರ್ತನೆಗಾರನು ದೇವರನ್ನು ಕೊಂಡಾಡಿದನು. ದೇವರು ದಾವೀದನಿಗೆ ತನ್ನ ಸಂಬಂಧದ ಬಗ್ಗೆ ಹೇಳಿದ್ದನ್ನು ಅವನು ದಾಖಲೆ ಮಾಡಿದ್ದಾನೆ: "ಅವನು ನನ್ನೊಡನೆ - ನನ್ನ ತಂದೆಯೂ ದೇವರೂ ಆಶ್ರಯ ದುರ್ಗವೂ ನೀನೇ ಎಂದು

ಹೇಳುವನು. ನಾನಾದರೋ ಅವನನ್ನು ಜ್ಯೇಷ್ಠ ಪುತ್ರನನ್ನೂ ... ಮಾಡಿಕೊಳ್ಳುವೆನು ..." (ಕೀರ್ತನೆ 89:24-29).

ಪ್ರವಾದಿಗಳಲ್ಲಿ ಅನೇಕರು ತಾನಾಯ್ದುಕೊಂಡ ಜನಾಂಗದೊಂದಿಗೆ ದೇವರ ತಂದೆ/ಮಕ್ಕಳ ಸಂಬಂಧವನ್ನು ಒತ್ತಿ ಹೇಳಿದ್ದಾರೆ. ಜನರು ತಮ್ಮ ತಂದೆಯಾದ ದೇವರಿಗೆ ನಿಷ್ಠೆಯಿಂದ ಇರದೇ ಇದ್ದಾಗ ಅವರಿಗೆ ಎಚ್ಚರಿಕೆಯ ಮಾತುಗಳಲ್ಲಿ ಇದು ಹೇಳಲ್ಪಟ್ಟಿದೆ. ಒಮ್ಮೆ ಅವರು ದೂರು ಹೇಳಿ, ಪಾರಸಿಯ ಅರಸ ಕೋರೇಷನನ್ನು ಅವರನ್ನು ವಿಮೋಚಿಸುವ ಸಾಧನವಾಗಿ ದೇವರು ಉಪಯೋಗಿಸಿದ್ದನ್ನು ಪ್ರಶ್ನಿಸಿದಾಗ ಯೆಶಾಯನ ಮುಖಾಂತರ ತೀಕ್ಷ್ಣವಾದ ಉತ್ತರವು ಕೊಡಲ್ಪಟ್ಟಿತು. "ನೀನು ಹುಟ್ಟಿಸುವುದೇನು ಎಂದು ತಂದೆಯನ್ನು ಕೇಳುವವನ ಪಾಡು ಪಾಡೇ! ನೀನು ಹೆರುವದೇನು ಎಂದು ಹೆಂಗಸನ್ನು ಕೇಳುವವನ ಗತಿ ಗತಿಯೇ!" (ಯೆಶಾಯ 45:9-11). (ಇಂಥದೇ ಕಾರಣಕ್ಕಾಗಿ ರೋಮಾಪುರ 7:14-24ರಲ್ಲಿ ಪೌಲನು ಈ ಪರಿಶುದ್ಧ ಬರಹವನ್ನು ಉಪಯೋಗಿಸಿದ್ದು ಆಸಕ್ತಿಯುಳ್ಳದ್ದಾಗಿದೆ.)

ಈ ವಾಕ್ಯಭಾಗಗಳು ತನ್ನ ಜನಾಂಗಕ್ಕೆ ಆಯ್ಕೆಯ ತಂದೆಯಂತೆ ದೇವರ ಸಂಬಂಧವು ಆತನ ಪರವಾಗಿ ಒಡತನವನ್ನು ಹಾಗೂ ಅವರ ಪರವಾಗಿ ಸೇವಕತ್ವವನ್ನು ಒಳಗೊಂಡಿದ್ದನ್ನು ತೋರಿಸುತ್ತದೆ. ಅವರು ವಿಗ್ರಹಾರಾಧನೆ ಮಾಡಿದಾಗ ತನ್ನ ಜನರ ಬಗ್ಗೆ ದೇವರ ನೋಟವು ತೀಕ್ಷ್ಣವಾಗುವಂತೆ ಮಾಡುತ್ತದೆ. ಅವರು ಕಟ್ಟಿಗೆಗೆ "ನೀನು ನನ್ನ ತಂದೆ" ಎಂದೂ ಕಲ್ಲಿಗೆ "ನೀನು ನನಗೆ ಜನ್ಮ ಕೊಟ್ಟಿ" ಎಂದು ಅವರು ಹೇಳಿದ್ದು ನಾಚಿಕೆಗೇಡಿತನದ್ದಾಗಿತ್ತು (ಯೆರೆಮೀಯ 2:26-28). ಅವರು ದಂಗೆಯೆದ್ದದ್ದು ಹಾಗೂ ಆತನ ಚಿತ್ತಕ್ಕೆ ಅಪನಂಬಿಗಸ್ತರಾಗಿರುವಂಥದ್ದು, ತಂದೆಯಂತೆ ಸರ್ವಶಕ್ತನಾದ ಕರ್ತನನ್ನು ಅಗೌರವಿಸುವಂತೆ, ಒಡಯನಂತೆ ಆತನಿಗೆ ಭಯಭಕ್ತಿ ತೋರಿಸದಂತೆ ವಿವರಿಸಲ್ಪಟ್ಟಿದೆ (ಮಲಾಕಿ 1:6).

ಎಲ್ಲಕ್ಕಿಂತ ಹೆಚ್ಚಾಗಿ, ದೇವರು ಅಬ್ರಹಾಮ, ಇಸಾಕ, ಯಾಕೋಬರಂಥ ಅವರ ಪಿತೃಗಳಿಗೆ ಮಾತ್ರವೇ ದೇವರಾಗಿರುವದಿಲ್ಲ ಎಂಬುದನ್ನು ಪ್ರವಾದಿಗಳು ಘೋಷಿಸುತ್ತಲೇ ಇದ್ದರು. ಆತನು ಯಾವಾಗಲೂ ಆಯ್ಕೆಮಾಡಲ್ಪಟ್ಟ ಜನಾಂಗದ ತಂದೆಯಾಗಿದ್ದಾನೆ, ಕೇವಲ ಒಬ್ಬನೇ ಜೀವಿಸುವ ದೇವರಾಗಿದ್ದಾನೆ. ಆತನ ಮೇಲೆ ಅವರು ಅವಲಂಬಿಸಬೇಕು: "ನೀನು ನಮ್ಮ ಪಿತೃವಾಗಿದ್ದೀಯಲ್ಲಾಣಿ ಅಬ್ರಹಾಮನು ನಮ್ಮನ್ನು ಅರಿಯನು, ಇಸ್ರಾಯೇಲನು ನಮ್ಮನ್ನು ಗುರುತಿಸನುಣಿ ಯೆಹೋವಾ, ನೀನೇ ನಮ್ಮ ಪಿತೃ" (ಯೆಶಾಯ 63:16). "ಈಗಲಾದರೋ ಯೆಹೋವನೇ, ನೀನು ನಮ್ಮ ತಂದೆಯಾಗಿದ್ದೀಣಿ ನಾವು ಜೇಡಿ ಮಣ್ಣು, ನೀನು ಕುಂಬಾರ, ನಾವೆಲ್ಲರೂ ನಿನ್ನ ಕೈಕೆಲಸವೇ" (ಯೆಶಾಯ 64:8) ಎಂದು ಅವರು ಸ್ವೀಕರಿಸಿಕೊಂಡರು.

ಇಸ್ರಾಯೇಲಿನ ಚರಿತ್ರೆಯಲ್ಲಿ ಬರಗಾಲ, ಕ್ಷಾಮ, ಶಿಕ್ಷೆ, ದಂಗೆ, ಸೆರೆವಾಸ, ವಿಗ್ರಹಾರಾಧನೆ, ಯುದ್ಧಗಳು ಇತ್ಯಾದಿಗಳು ಬಹಳವಾಗಿ ಇದ್ದರೂ ಆಯ್ಕೆ ಮಾಡುವ ತಂದೆಯಾದ ದೇವರು ಯಾವಾಗಲೂ ತನ್ನನ್ನು ಅವರ ತಂದೆಯನ್ನಾಗಿ ಒಪ್ಪಿಕೊಂಡಿದ್ದನು (ಯೆರೆಮೀಯ 31:9ಡಿ). ಆತನು ತನ್ನ ವಾಗ್ದಾನಕ್ಕೆ/ಒಡಂಬಡಿಕೆಗೆ ನಂಬಿಗಸ್ತನಾಗಿದ್ದನು ಮತ್ತು ತನ್ನ ಪ್ರೀತಿಯ ಮಕ್ಕಳಿಗೆ ಕ್ಷಮಾಪಣೆಯ ಹಸ್ತಗಳನ್ನು ಚಾಚುತ್ತಲೇ ಹೋದನು. ಹಾದಿ ತಪ್ಪಿದ ತನ್ನ ಮಕ್ಕಳಿಗೆ ದೇವರು ಪ್ರತಿಕ್ರಯಿಸದ ಪ್ರೀತಿಯನ್ನು ವಿವರಿಸುವ ಹಳೇ ಒಡಂಬಡಿಕೆಯಲ್ಲಿಯ ವಾಕ್ಯಭಾಗಗಳಲ್ಲಿ ಇದೂ ಒಂದು:

> ಇಸ್ರಾಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯಿಟ್ಟು ಆ ನನ್ನ ಮಗನನ್ನು ಐಗುಪ್ತ ದೇಶದಿಂದ ಕರೆದೆನು. [ಪ್ರವಾದಿಗಳು] ಕರೆ ಕರೆದ

ಹಾಗೆಲ್ಲಾ ನನ್ನ ಜನರು ದೂರದೂರ ಹೋಗುತ್ತಲೇ ಬಂದರು; ಬಾಳ್‌ದೇವತೆಗೆ ಯಜ್ಞಮಾಡಿ ಬೊಂಬೆಗಳಿಗೆ ಧೂಪಹಾಕಿದರು. ನಾನೇ ಎಫ್ರಾಯೀಮಿಗೆ ನಡೆದಾಟವನ್ನು ಕಲಿಸಿದೆನು; ಅದನ್ನು ಕೈಯಲ್ಲಿ ಎತ್ತಿ ಕೊಂಡೆನು; ತನ್ನನ್ನು ಸ್ವಸ್ಥಮಾಡಿದವನು ನಾನೇ ಎಂದು ಅದಕ್ಕೆ ತಿಳಿಯಲಿಲ್ಲ. ನಾನು ನನ್ನ ಜನರನ್ನು ಮಾನವರಿಗೆ ತಕ್ಕ ಮೂಗುದಾರದಿಂದ, ಅಂದರೆ ಮಮತೆಯ ಹಗ್ಗದಿಂದ ಸೆಳೆದುಕೊಂಡೆನು; ನೊಗವನ್ನು ತಲೆಯ ಈಚೆಗೆ ತೆಗೆಯುವವರಂತೆ ನಾನು ಅವರನ್ನು ಸುಧಾರಿಸಿ ಅವರಿಗೆ ತೀನಿಯನ್ನು ನಯದಿಂದ ಇಕ್ಕಿದೆನು (ಹೋಶೇಯ 11:1-4).

---

ಟಿಪ್ಪಣಿಗಳು

[1]Will Durant, *Our Oriental Heritage* (New York: Simon and Schuster, 1954), 60ff.; Edith Hamilton, *Mythology* (New York: New American Library of World Literature [Mentor Book], 1959), 24-28. [2]ವಿಮೋಚನಕಾಂಡ 20:1-6; ಧರ್ಮೋಪದೇಶ ಕಾಂಡ 23:17; ನ್ಯಾಯಾಧಿಪತಿಗಳು 10:6-10; 1 ಅರಸು 11:4, 5, 33; 2 ಅರಸು 21:3; 23:13. ಅಷ್ಟೋರೆತ್ ದೇವತೆಗಳು ಬಾಳನ ಹೆಣ್ಣು ಸಂಗಾತಿಗಳೆಂದು ತಿಳಿಯಲ್ಪಡುತ್ತಿದ್ದವು. [3]ಅಂದರೆ "ತಂದೆ"ಯಂತೆ ದೇವರಿಗೆ ಸಂಬಂಧಿಸಿದ್ದಕ್ಕೆ ಪುರುಷರು ಸ್ತ್ರೀಯರಿಗಿಂತ ಶ್ರೇಷ್ಠ ರಾಗಿರುವರು ಎಂಬ ಪೂರ್ವಕಲ್ಪಿತ ನಂಬಿಕೆಗೆ ಆಧಾರವಿರುವದಿಲ್ಲ. [4]ಇಂಗ್ಲೀಷ್ ಭಾಷಾಂತರ ಗಳು 1 ಅರಸು 11:5, 33ರಲ್ಲಿ "goddess" ಎಂಬ ಮಾತನ್ನು ಉಪಯೋಗಿಸಿದ್ದಾರೆ. ಆದರೆ ಇದು ಹಿನ್ನೆಲೆಯ ಗುರುತಿಗಾಗಿ ಇದೆ. ಯಾಕಂದರೆ ಅಷ್ಟೋರೆತ್ ಎಂಬುದು ಸೀದೋನ್ಯರ ಸ್ತ್ರೀ ದೇವತ (goddess) ಆಗಿತ್ತು. ಈ ಹಂತದಲ್ಲಿ ಇಬ್ರಿಯರಿಗೆ ಕೇವಲ *elohe* ಎಂಬುದಿದ್ದು ಅದರ ಅರ್ಥ of god(s) "ದೇವರ" ಎಂಬುದು ಅಷ್ಟೋರೆತನ್ನು ಗುರುತಿಸುತ್ತಿತ್ತು. ಉದಾಹರಣೆಯಾಗಿ ಆದಿಕಾಂಡ 26:24ರಲ್ಲಿ ಇಬ್ರಿಯರ ದೇವರಿಗೆ ಸಂಬಂಧಿಸಿ ಹೇಳಲ್ಪಟ್ಟಿದೆ. [5]ಹೆಚ್ಚಿನ ವ್ಯಾಖ್ಯಾ ನಕ್ಕಾಗಿ, ನೋಡಿರಿ Robert C. Dentan, "Malachi," in *The Interpreter's Bible,* vol. 6, ed. George Arthur Buttrick (Nashville: Abingdon, 1956), 1134.